ಹರಾಜ್ ತಾರೀಖು ವ ಸ್ಥಳದ ಹೆಸರು.	ಸಾಗುವಾನೀ	ಬೀಟೀಮರ.	ಕಾಡುಮರ.	ತ್ಯಾಗದ ಕೂ ಜೆಗಳು.	ಕಾಡುಮರ	ಜುಮ್ಲಾ.
1ನೇ ಫಿಬ್ರುವರೀ 1875, ಆಯನೂರು ಡಿಪೋ ಶಿವಮೊಗ್ಗಾ ತಾಲ್ಲೂಕು.	465	60	433	270	110	1,338

ಹರಾಜ್ ನಿಬಂಧನೆ—1873ನೇ ಬ್ಯಾ 12ನೇ ಮತ್ತು ಂ 20ನೇ ನಂಬರ್, ಬಾಬತು ಮೈಸೂರು ಗೆಜೆಟ್ ಇಸ್ತಿಹಾರ್‌ನಾಮೆ ಅನುಸರಿಸಿ ಶಿವಮೊಗ್ಗಾ ತಾಲ್ಲೂಕು ಟಿಂಜರೀಯಲ್ಲಿ ಮೊಬಲಗ ಪಾವತೀ ಮಾಡತಕ್ಕದ್ದಲ್ಲದೆ ದರಖಾಸ್ತು ಮೊಬಲಗ್ ಪೈೇ ಕೇಕಡಾ ಇಪ್ಪತ್ತೈದರ ಮೇರೆ ಸದರೀ ಟಿಂಜರೀಯಲ್ಲಿ ಪಾವತೀ ಮಾಡಿ ಪಡದುಕ್ಕೊಂಡ ರಸೀದಿಯನ್ನು ಹರಾಜ್ ತಾರೀಖು ಲಾಗಾಯತು 5ನೇ ದಿನ ಪೂರೈಸಲಿಕ್ಕೆ ಮುಂಚಿತವಾಗಿಯೇ ಹರಾಜ್ ನಡಿಸುವ ಆಫಿಸರರಲ್ಲಿ ಹಾಜರ್ ಮಾಡತಕ್ಕದ್ದು. ಪ್ರತ್ತಿಗೆ ತಪ್ಪಿದವರ ಭಾಬತು ನಾಟುಗಳನ್ನು ಪುನಶ್ಚ ವಿಕ್ರಯಿಸುವ ಬಗ್ಯೆ ಹರಾಜ್ ತಾರೀಖು ಲಾಗಾಯತು 6ನೇ ದಿನ ಡಿಪೋದಲ್ಲಿಯೇ ಯರಡನೆ ಹರಾಜ್ ನಡಿಸಲ್ಪಡುವದು.

ತಾರೀಖು 22ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ, ಮುಮ್ದಾರ್ 258 ಟ್ಯಗಳ ಬಾಬತ್ತು ಸಂದಲ್ ಈ ಕೆಳಗೆ ನಮೂದಿಸುವ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಸ್ರ 1876ನೇ ಇಸವಿ ಜನವರೀ 21ನೇ ಮತ್ತು ಂನಲ್ಲಿ ಹುಣಸೂರು ಕೋಠೀಯೊಳಗೆ 198¼ ಟ್ಯಗಳು.—ಬಗರ್ ಅದರ್ ಐಬಗರ್, ಚಕ್ಕೆಗಳು, ಬುಕಣಿ, ನಾಕಾರೇ ವಗೈರೇ.

ಸ್ರ 1876ನೇ ಇಸವಿ ಜನವರೀ 24ನೇ ಮತ್ತು ಂನಲ್ಲಿ ಶ್ರೀರಂಗಪಟ್ಣದ ಕೋಠೀಯೊಳಗೆ 59¾ ಟ್ಯಗಳು.—ಬಗರ್ ಅದರ್ ಐಬಗರ್, ಚಕ್ಕೆಗಳು, ಬುಕಣಿ, ನಾಕಾರೇ ವಗೈರೇ.

ಹರಾಜ್ ನಿಬಂಧನೆ,—ಕ್ರಯದ ಮೊಬಲಗ ಪೈಕೀ ಕೇಕಡ 25 ರೂಪಾಯಿಗಳು ಹರಾಜ್ ತಾರೀಖು ಲಾಗಾಯತು 3ನೇ ದಿವಸದೊಳಗಾಗಿ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗ ಸ್ರ 1876ನೇ ಇಸವಿ ಮಾರ್ಚಿ 26ನೇ ಮತ್ತು ಮಿಗೆ ವಳಗಾಗಿ ಸಲ್ಲಿಸತಕ್ಕದ್ದು. ಮಿಕ್ಕ ದರೋಬಸ್ತು ಪರತ್ತುಗಳು ಸ್ರ 1874ನೇ ಇಸವಿ ಡಿಸೆಂಬರ್ 5ನೇ ಮತ್ತು ಂ 48ನೇ ನಂಬರ್ ಮೈಸೂರ್ ಗೆಜೆಟಿನಲ್ಲಿ ಫಾಯಿಷ್‌ಮಾಡಲ್ಪಟ್ಟ ಸ್ರ 1874ನೇ ನವಂರ್ 26ನೇ ಮತ್ತು ಂ 256ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ವಿಧಿಸಲ್ಪಟ್ಟ ಪ್ರಕಾರ ಇರತಕ್ಕದ್ದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

Notice regarding an application of Bangalura and Munichanna for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡಿ॥ ಕಮಿಶ್ಶನರ್ ಕೋರ್ಟ್‌ನಿಂದ.

ಸ್ರ 1875ನೇ ಇಸವಿ ವಿಲ್ ಮಿಸಲೇನಿಯಸ್ ನಂಬರ್ 85.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ತಾಲ್ಲೂಕು ಕರಿಯಾಲನ ಪಾಳ್ಯದಲ್ಲಿ ಯಿರುವ ಬೆಂಗಳೂರ, ಮುನಿಚನ್ನ ಸಹಾ ತನ್ನ ತಂದೆ ಚಿಕ್ಕ ದ್ಯಾವನ ಲೇಖೆ 300 ರೂಪಾಯಿ ಬರಮಾಡಿಕ್ಕೊಳ್ಳತಕ್ಕ ಬಗ್ಯೆ ಸ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಜನವರೀ 2ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟ್‌ನಲ್ಲಿ ವಿಚಾರ್ಕೆ ಮಾಡಲ್ಪಡುತ್ತೇಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ತಾಪಿಸಿ ಕೊಡಬಹುದು.

ಬತಾರೀಖು 23ನೇ ಮಾಹೆ ಡಿಸೆಂಬರ್ 1875ನೇ ಇಸವಿ, ಮೊಕ್ಕಾಂ ಬೆಂಗಳೂರು.

ABDUL KHADAR,
For Offg. Dy. Commr.

KOLAR DISTRICT.

ತಾರೀಖು 23ನೇ ಡಿಕಂಬರ್ 1875.

ಇದರಿಂದ ತಿಳಿಯಪಡಿಸುವದೇನಂದರೆ, ಸ್ಯ 1862ರ ಲಾಗಾಯತು 1870ನೇ ಇಸವಿ ವರಿವಿಗೆ ಈ ಕೋರ್ಟು ಅರಿಜಿನಲ್ ವ ಅಪ್ಪೀಲ ಮೊಕದ್ದಮೆಗಳೊಳಗೂ, ಅಮಲ್‌ಜಾರೀ ವ ಯಿತರ ಮಿಸಲೇನಿಯಸ್ ಮೊಕದ್ದಮೆಗಳೊಳಗೂ, ನಡವಳಿತಗಳೊಳಗೂ, ಕ್ರಿಮಿನಲ್ ಮೊಕದ್ದಮೆಗಳೊಳಗೂ, ಮತ್ತು 1839ನೇ ಯಿಸವಿ ಲಾಗಾಯತು 1862ನೇ ಯಿಸವಿ ವರಿಗಿನ ಬಾಬತು ಮಾಜೀ ಜದೀದ್ ಪ್ರಿನ್ಸಿಪಲ್ ಸದರ್ ಅಮೀನಿ ವ ಮಾಜೀ ಬೆಂಗಳೂರು ಡಿವೀಜ್ಯ ಸೂಪ್ರಿಟೆಂಡೆಂಟ್ ಈ ಕೋರ್ಟುಗಳಿಂದ ಬಂದ, ಕೆಲವು ಸಿವಿಲ್ ಮೊಕದ್ದಮೆಗಳೊಳಗೂ, ಕಕ್ಷಿಗಾರ್‌ರುಗಳಿಂದ ದಾಖಲ್ಮಾಡಲ್ಪಟ್ಟ ದರೋಬಸ್ತು ದಸ್ತಾವೇಜುಗಳೂ, ಸಾಧನಗಳೂ, ಲೆಕ್ಕಗಳೂ ವ ಯಿತರ ಕಾಗದಗಳೂ, ಹಳ್ಳೆ ಜುಡಿಷಿಯಲ್ ರಿಕಾರ್ಡ್ಡಿಗಳನ್ನು ನಾಶಪಡಿಸತಕ್ಕ ಬ್ಗೈ ಯೇರ್ಪಟ್ಟ ರೂಲ್ಸ್ ಅನುಸಾರವಾಗಿ ಸ್ಯ 1876ನೇ ಯಿಸವಿ ಮಾರ್ಚಿ ಗುರ್ಯೇತಾರೀಖಿನ ದಿನ ನಾಶಮಾಡಲ್ಪಡುವದು.

2. ಐಜ್ಯ ಮೊಕದ್ದಮೆಗಳೊಳಗೂ, ನಡವಳಿತಗಳೊಳಗೂ, ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತಾವೇಜುಗಳನ್ನಾಗಲಿ ವಾಪಸು ಪಡಿಯತಕ್ಕ ಖಾಯಿಷ್ ಉಳ್ಳ ಕಕ್ಷಿಗಾರರು ಮೇಲೆ ತಿಳಿಸಲ್ಪಟ್ಟ ತಾರೀಖಿಗೆ ಮುಂಚಿತವಾಗಿ ಈ ಕೋರ್ಟಿಗೆ ಕೋರ್ಟ್‌ದಿನಗಳಲ್ಲಿ 11 ಘಂಟೆ ಲಾಗಾಯತು ಸಾಯಂಕಾಲ 4 ಘಂಟೆವರಿಗೆ ಅರ್ಜೀ ಬರದುಕ್ಕೊಳ್ಳತಕ್ಕದ್ದು.

Descriptive roll of an escaped convict from the District Jail.

ಸ್ಯ 1875ನೇ ಇಸವಿ ಡಿಸೆಂಬರ್ 23ನೇ ಮಧ್ಯಂ ಬೆಳಿಗ್ಯೆ ಸುಮಾರು 11 ಘಂಟೆ ವೇಳೆ ಕೋಲಾರ ಜೈಲ್ ತೋಟದಿಂದ ಫರಾರಿಯಾದ ಕೈದಿ ಬಾಬಿಗನ ಜಹರೇ ಪಟ್ಟಿ.

ಹೆಸರು ಬಾಬಿಗ, ತಂದೆ ಹೆಸರು ಅಡಿಯನ್ನ, ಜಾತಿ ಮತ್ತು ಕಸಬು, ತೆಲಗುಬಣಜಿಗರವ ವ್ಯವಸಾಯ, ವಾಸಸ್ಥಳ ಹರ್‌ಮೇಜಸ್ಟೀ ೀವೆ ಬಳ್ಳಾರಿ ಡಿಸ್ಟ್ರಿಕ್ಟು, ಹಿಂದುಪುರ ತಾಲ್ಲೂಕು ಮ್ಯಾದೇವರಪಲ್ಲಿ, ಎತ್ತರ ಮತ್ಯಾವದಾದರು ಮುಖ್ಯವಾದ ಗುರುತುಯಿವುಗಳ ದೇಖಿಲ್ ಜಹರ, ಯಣಗೆಂಪು ತೆಳ್ಳಗಿದ್ದಾನೆ, ಎತ್ತರ 5, ಅಡಿ 5 ಅಂಗುಲ, ಗುಂಡುಮುಖ ಸುಮಾರು ವಯಸ್ಸು 30 ವರುಷ, ಕಾಲುಗಳ ಮೇಲೆ ಖಜ್ಜಿಯ ಕಲೆಗಳು, ಸ್ವಲ್ಪ ಬಗ್ಗಿದ್ದಾನೆ, ತಳ್ಳಗೆ ಮೀಸೆ ಬಿಟ್ಟಿದ್ದಾನೆ, ಯಾವ ವಿಧವಾದ ಸಜಾ ಅದನ್ನು ವಿಧಿಸಿದ ತಾರೀಖು ಮತ್ತು ಯಾವ ತಕಸೀರಿಗೋಸ್ಕರ, ಕೋಲಾರ ಡಿಸ್ಟ್ರಿಕ್ಟು ಮೇಜಸ್ಟ್ರೇಟರ 1875ನೇ ಇಸವಿ ಕ್ರಿಮಿನಲ್ ನಂಬರ್ 33ನೇ ಮೊಕದ್ದಮೆಯಲ್ಲಿ ಜೋರಿಗಾಗಿ ಇಂಡಿಯನ್ ಪೆನಲ್‌ಕೋಡ್ 392ನೇ ಸೆಕ್ಷನ್ ಮೇರಿಗೆ, ಮೂರು ವರುಷಗಳ ಕಠಿಣ ಸಜಾ, ತಾರೀಖು 26ನೇ ನವಂಬರ್ 1875, ತಪ್ಪಿಸಿಕೊಂಡ ತಾರೀಖು, 23ನೇ ಡಿಸೆಂಬರ್ 1875. ಷರಾ, ಈ ಕೈದಿಯು ಸದರೀ ಜೈಲ್ ತೋಟದಲ್ಲಿ ಕೆಲಸ ಮಾಡುತ್ತಿರುವಾಗ್ಯೆ ಅವನ ಕುಡುತ ಮತ್ತು ಅವನ ಬಲಗಾಲಿನ ಕಬ್ಬಿಣದ ಬೇಡಿ ಇವುಗಳನ್ನು ಬಿಟ್ಟು ಫರಾರಿಯಾಗಿದ್ದಾನೆ, ಫರಾರಿಯಾಗುವ ವೇಳೆ ಬಿಳಿ ಚಡ್ಡಿ ಕುಲಾವಿ ಮತ್ತು ಕಂಬಳಿ ಹೊದಿದ್ದನು ಮತ್ತು ಎಂದು ಕಾಲಿನಲ್ಲಿ ಉಂಗ್ರ ನರಪಣಿ ಸಹಾ ಯಿತ್ತು

B. KRISHNAIENGAR,
Dy. Commr. & Magistrate.

Notice regarding an application of C. Muniyappa for a certificate under Act XXVII of 1860.

ಕೋಲಾರ ಡಿ॥ ಡಿಪ್ಯುಟಿ ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—ಚಿಕ್ಕಬಳ್ಳಾಪುರ ತಾಲ್ಲೂಕು ವಾಬಸಂದ್ರದಲ್ಲಿರುವ ಚಿತ್ತೂರು ಕಂಮ್ಮೈ ಮುನೆಪ್ಪನೆಂಬವನು ಫಾತೀಪಟ್ಟು ತನ್ನ ತಂದೆ ವೆಂಕಟ್ರಾಮಂಣನಿಗೆ ಬರತಕ್ಕ ಪೈಸೇ ಬಾಕೀಗಳಾದ 300 ರೂಪಾಯಿಗಳು ವಸೂಲ್‌ಮಾಡಿ ಕೊಳ್ಳತಕ್ಕ ಬ್ಗೈ 1860ನೇ ಇಸವಿ 27ನೇ ನಂ. ಆಕ್ಟಪ್ರಕಾರ ತನ್ನ ಹೆಸರಿಗೆ ವಾರಸ ಸರಟಿಫಿಕೇಟ್ ಕೊಡಿಸಿಕೊಡಬೇಕೆಂದು ಗುಜರಾಯಿಸಿದ ಅರ್ಜಿಯು 1876ನೇ ಇಸವಿ ಫಿಬ್ರವರಿ 5ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತೇಯಾಗಿಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ಯಿರುವ ಸ್ಥಳಕ್ಕೆ ಬಂದು ರೂಬರು ಹಾಜರಾಗಿ ತಿಳಿಸತಕ್ಕದ್ದಾಗಿರುತ್ತೆ.

ತಾರೀಖು 31ನೇ ಡಿಸೆಂಬರ್ 1875ನೇ ಇಸವಿ, ಮೊಕ್ಕಾಂ ಕೋಲಾರ.

P. N. PURNAIYA,
For Dy. Commr.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ಡಿಸ್ಟ್ರಿಕ್ಟ್ ವ.ಜಕೂರ್ ತಾಲ್ಲೂಕುಗಳಿಂದ ಬಂದು ಹೆಡ್‌ಕ್ವಾರ್ಟರ್‌ನಲ್ಲಿ ಜಮಾಯಿಸಲ್ಪಟ್ಟಿರುವ ಬಂದೂಕ ವಗೈರೇ ಹಳೇ ನಾಕಾರೆ ಸಾಮಾನುಗಳು 1876ನೇ ಇಸವಿ ಜನವರೀ ಮಾಹೆ 26ನೇ ತಾರೀಖಿನಲ್ಲಿ ತುಮಕೂರ್ ತಾಲ್ಲೂಕು ಕಚ್ಚೇರಿಯಲ್ಲಿ ಹರಾಜು ಹಾಕಲ್ಪಡುತ್ತವೆ.

ತಾ|| 23ನೇ ಡಿಸಂಬರ್ 1875ನೇ ಯಿಸವಿ, ತುಮಕೂರು.

C. J. PEARSE,
Dy. Commr.

MYSORE DISTRICT.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು—ನೇ ಮಾಹೆ ಡಿಸಂಬರ್ 1875ನೇ ಯಿಸವಿ.

1875ನೇ ಇಸವಿ ಆಗಸ್ಟು 29ನೇ ತಾರೀಖಿನಲ್ಲಿ ತಲ್ಕಾಡುತಾಲ್ಲೂಕಿಗೆ ಸೇರಿದ ಕೆಂಡನಕೊಪ್ಪಲು ಚಾವುನ ಜೆಂಡತಿ ಕಾಮುರೆಸಿಯಂಬವಳನ್ನ ಖೂನಮಾಡಿದ್ದಾಗಿ ಆಪಾದಿಸಲ್ಪಟ್ಟು ಯಿರುವ ಈ ಕೆಳಗೆ ವಿವರಿಸಲ್ಪಟ್ಟು ಯಿರುವ ಗಿರಿಯನೆಂಬುವನ ದೆಸ್ತಗಿರಿಯ ಸಾಬೀತಿಗೆ ತಕ್ಕ ವರ್ತಮಾನ ಕೊಡುವವರಿಗೆ 100 ರೂಪಾಯಿಗಳು ಯಿನಾಂ ಕೊಡಲ್ಪಡುವದು.

ವಿವರಣೆ.

ಹೆಸರು ಗಿರಿಯಾ, ತಂಬೆ ಹೆಸರು ಮುತ್ತಾ, ಜಾತಿ ಪಸ್ತ, ವಯಸ್ಸು ಸುಮಾರು 28 ವರುಷ, ವುನ್ನತ ಆಡಿ 5, ಅಂಗ್ಲ 6, ಗುರ್ತುಗಳು, ಕಪ್ಪುವರ್ನ, ಉದ್ದಮುಖ, 1 ಜೊತೆ ಹತ್ತಕಡಕು ಇಟ್ಟುಯಿದ್ದಾನೆ, ಮಿಕಿ ಬಿಟ್ಟುಯಿಧಾನೆ.

MAHOMED ALLI,
For District Magistrate.

HASSAN DISTRICT.

Notice of sale of land in the Belur Taluk on the 10th February 1876.

ಹಾಸನ ಡಿಸ್ಟ್ರಿಕ್ಟ್ ಡಿ|| ಕಮ್ಮಿಷನರ ಕಚ್ಚೇರಿಯಿಂದ.

ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಲಕ್ಕುಂದದ ಹೋಬಳಿ ಬಿಕ್ಕೊಡು ತಪ್ಪಲು ಹುಸಗೂರು ಗ್ರಾಮಕ್ಕೆ ಸೇರಿದ ಈ ಕೆಳಗೆ ನಮೂದಾಗಲ್ಪಡುವ ಕಾಫೀ ಜಂಗಲನ್ನು ಅದೇ ಸ್ಥಳದಲ್ಲಿ ಸ್ ೧೮೭೬ನೇ ಇಸವಿ ಫಿಬ್ರವರೀ ತಾರೀಖು 10ನೇ ದಿವಸ ಹಗಲು 11 ಘಂಟೆ ಲಾಗಾಯತು ಸಾಯಂಕಾಲದ 5 ಘಂಟೆ ವರಿಗೂ ಹರಾಜು ಹಾಕಿಸಲ್ಪಡುತ್ತೆ, ತೆಗದು ಕೊಳ್ಳುವದಕ್ಕೆ ಯಿಚ್ಛೈವುಳ್ಳವರು ಆ ಕಾಲಕ್ಕೆ ಹಾಜರಾಗಿ ಪೋಟಾ ಪೋಟಿಯಿಂದ ಚಡ ದರಖಾಸ್ತು ಮಾಡಿದವರಿಗೆ ಸದರೀ ಜಂಗಲನ್ನು ಕೊಡಲ್ಪಡುತ್ತೆ. ಮತ್ತು ಹರಾಜಿನ ಪರತ್ತುಗಳನ್ನು ಹರಾಜು ಕೂಗಿಸುವ ಆಫಿಸರರು ಆ ಸ್ಥಳದಲ್ಲಿ ಸಂಬಂಧಪಟ್ಟ ಜನರಿಗೆ ರೂಬರು ತಿಳಿಕ್ಯಾರು.

ಸ್ ೧೮೭೬ನೇ ಇಸವಿ ಫಿಬ್ರವರೀ 5ನೇ ತಾರೀಖು ವರಿಗೆ ಈ ಆಫಿಸಿನ ಹೆಸರಿಗೆ ಸದರೀ ಜವಿುನಿಗೋಸ್ಕರ ಖಾಯಿಷ್ಷವುಳ್ಳವರು ದರಖಾಸ್ತು ಬರದುಕೊಳ್ಳುತ್ತಾ ಬರಬಹುದು, ಈ ವೇರಿಗೆ ದರಖಾಸ್ತನ್ನ ಬರದು ಕೊಂಡಂಥಾವರು ಹರಾಜು ಕೂಗಿಸುವ ವೇಲಂಜ ದಿವಸ ಹರಾಜ್ ಸ್ಥಳದಲ್ಲಿ ಹಾಜರ್ ಯಿರಬೇಕು, ಹಾಗೆ ನಡಯದೆ ಹೋದರೆ ಅವರ ದರಖಾಸ್ತನ್ನು ಮುಂಜಾಡತಕ್ಕ ಅಥವಾ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ಡಿಪ್ಯೂಟಿ ಕಮ್ಮಿಷನ್ನರವರೇ ವುಳಿಕೊಂಡು ಯಿದ್ದಾರೆ.

ನಂಬರು 15ನೇ ಹಳೆಯೂರು ವತ್ತಿನ ದೊಡ್ಡ ವುಡ್ಸೆ.

ಯಿದರ ಚಕ್ಕುಬಂದಿ.

ಪೂರ್ವಕ್ಕೆ—ಜಿವುಟಿಕೆರೆ ವಳಗೆರೆ ಪಾಳುಗದ್ದೆ ಬಂಜರು ಗಿಡದ ಬೆ ಆಲದ ಮರ.
ದಕ್ಷಿಣಕ್ಕೆ—ಬಸರಿ ಮರ.
ಪಶ್ಚಿಮಕ್ಕೆ—ಹಳೆಯೂರು ಹೊಲಗೇರಿ ಆಗಳು.
ವುತ್ತರಕ್ಕೆ—ನೆಲ್ಲಿಮರದ ಆಗಳು.

ಈ ಮಧ್ಯೆ ಅಳತೆ ಪೂರ್ವ ಪ್ಚ್ಚಿಮ ಗಜ 240, ದಕ್ಷಿಣ ವುತ್ತರ ಗಜ 360, ನಲೆಗಜಗಳು 86400ಕ್ಕೆ, ಯಕರೆ 17, ರೋಡ್ 3, ಪೋಲ್ 16, ಗಜ 6 ವುಳ್ಳದ್ದು.

ಬತಾರೀಖು 20ನೇ ಮಾಹೆ ಡಿಸೆಂಬರ್ ಸ್ರ 1875ನೇ ಇಸವಿ, ಮೊಕ್ಕಾಂ ಅರಕಲಗೂಡು.

E. SHAW,
Offg. Dy. Commr.

KADUR DISTRICT.

Notice of sale of a coffee jungle in the Koppa Taluk on the 11th February next, the holder having failed to conform to the terms of the patta under which the jungle was granted him.

ಕಡೂರು ಡಿಸ್ಟ್ರಿಕ್ಟ್ ಕಾಫೀ ಡಿಪಾರ್ಟಮೆಂಟ್ ಅಸಿಸ್ಟೆಂಟ್ ಕಮಿಷನರ್ ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಮೊರವಳ್ಳಿ ಮೊಗಣಿ ಕರಿಕೆಕೊಂಡ ಗಾ ಮದ ಕರಿಕೆಕೊಂಡದ ಕಾಫಿ ಯಂಬುವದಕ್ಕೆ ತಾಲ್ಲೂಕು ನಂಬರು 96, ನಗರ ಡಿವೀಜನ್ ನಂಬರು 85, ಕಮಿಷನರ ಹಜೂ ರು ನಂಬರು 2596ನೇ ಪಟ್ಟೆಯನ್ನ ಪಡೆದ ಅಗಳಗುಂಡಿ ವೆಂಕಪ್ಪಯ್ಯನೆಂಬುವನು ರೂಲ್ಸ್ ಪ್ರಕಾರ ಗಿಡಗಳನ್ನ ಹಾಕದೆ ತ ಪ್ಪಿ ಇರುತ್ತಾನಾಗಿ ಪಟ್ಟೆಯ 3ನೇ ಕಲಂ ಮೇರೆಗೆ ಡಿಪ್ಯುಟಿ ಕಮಿಷನರ್ ಸಾಹೆಬರವರ ಮಾಹೆ ಮಜಕೂರು 14ನೇ ಮುಕ್ತಂ 1313ನೇ ನಂಬರು ಡಾಕೆಟ್ ಅನುಸರಿಸಿ ಈ ಕೆಳಗೆ ಕಾಣಿಸಿ ಯಿರುವ ಬೌಂಡರಿವುಳ್ಳ ಸ್ತಳವನ್ನ ಸ್ರ 1876ನೇ ಇಸವಿ; ಫಿಬ್ರವ ರೀ ತಿಂಗಳು 15ನೇ ತಾರೀಖು ದಿವಿ 11 ಘಂಟೆ ಲಾಗಾಯತು 4 ಘಂಟೆ ವರಿಗೆ ಚಿಕ್ಕ ಮಗಳೂರು ಮೊಕ್ಕಾಮಿನಲ್ಲಿ ನಮ್ಮ ಆಫಿಸ್ ರೂಬರು ಹರಾಜ್ ಹಾಕಲ್ ಪಡುತ್ತೆ, ಅಪೇಕ್ಷೆವುಳ್ಳವರು ಜಡದರಖಾಸ್ತಿನಿಂದ ಪಡೆಯಬಹುದು.

ಹಾಗೆ ಪಡೆದವರು ಹರಾಜು ಕೈದಾಗುತ್ತಲೇ ಕೀಕಡಾ 25 ರೂಪಾಯಿನಂತೆ ಕೇವಣಾತಿ ಇಟ್ಟು ಮಿಕ್ಕ ಮೊಬಲಗನ್ನ ಹರಾ ಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ಹಾಜರ್ಮಾಡಿ ಸದರೀ ಸ್ತಳವನ್ನು ಸುಫರ್ದು ಮಾಡಿಕ್ಕೊಳ್ಳಬೇಕು, ತಪ್ಪಿದರೆ ಪುನಹಾ ಹರಾಜು ಮಾಡಿಸಿ ಕಮ್ಮಿ ಬರುವ ಹಣಕ್ಕೆ ಮೊದಲು ದರಖಾಸ್ತುದಾರನನ್ನ ಜವಾಬುದಾರನನ್ನಾಗಿ ಮಾಡಿ ಅವನ ಜಿಂದ ಗಿಯಿಂದ ಭರ್ತಿಮಾಡಿಕ್ಕೊಳ್ಳುವದಲ್ಲದೆ ಈ ಕೇವಣಾತಿಯನ್ನ ಸರಕಾರಕ್ಕೆ ಕೀರಿಸೋಣಾಗುತ್ತದೆ.

ಕರಿಕೆಕೊಂಡದ ಮೇಲುಗಡೆ ಜಂಗಲೀಯಲ್ಲಿ ವಾಟೆಬಿಚ್ಚಲ್‌ಕಾಡಿನಲ್ಲಿ ಈ ಕಾನಿನ ಚತುರ್ಗಡಿ.

1 ಪೂರ್ವಕ್ಕೆ ದುರ್ಗದ ಗುಡ್ಡದ ಬುಡದಲ್ಲಿರುವ ನೆಲ್ಲೀಮರದ ಯಡಕ್ಕೆ ದಿಮ್ಮೀ.
1 ಪಶ್ಚಿಮಕ್ಕೆ ದನತಿರುಗುವ ದಾರೀ ಮಾವಿನ ಮರದ ಹತ್ತ ದಿಮ್ಮೀ.
1 ದಕ್ಷಿಣಕ್ಕೆ ನೀರಸರಕುಲು, ಮಜ್ಜೀಮರ, ಬಡಚರನ ಸೊಪಿಹತ್ತ ದಿಮ್ಮೀ, ಕವಲುಮರದ ಹತ್ತ ದಿಮ್ಮೀ ಸಹಾ.
1 ಉತ್ತರಕ್ಕೆ ನೀರಸರಕುಲು, ಮಜ್ಜೀಮರ, ಹುಲವೇಮರದ ಹತ್ತದಿಮ್ಮೀ.

ಈ ಚತುರ್ಗಡಿ ಮಧ್ಯೆ ಅಳತೆ ಪ್ರಕಾರ ಆಗುವ ನಲೆಗಜ 195840ಕ್ಕೆ ಯಕರೇ (40) ಗುಂಟೆ (18) ಗಜ (62.)

ಬತಾರೀಖು 29ನೇ ಡಿಕಂಬರು 1875ನೇ ಇಸವಿ, ಚಿಕ್ಕ ಮಗಳೂರು.

MAHOMED SALIHA,
Officer in charge of Coffee Department.

PRIVATE ADVERTISEMENT.

ಸ್ವಂತ ಪ್ರಕಟನೆ.

ಕೊರಟಗೆರೆ ಅಂಜೇ ಮುತ್ಸದ್ದಿ ಶ್ರೀನಿವಾಸೈಯಂಗಾರ್ರ ಬಾಬತು ಹತ್ತು ರೂಪಾಯಿ ಮದ್ರಾಸ್ ಕರ್ರನ್ಸಿ ನೋಟ್ ಈ ಕೆಳಗೆ ನಮೂದಿಸಲ್ಪಡುವ ನಂಬರುಗಳ ಯಡಭಾಗ 1, ಬಲಭಾಗ 1, ಈ ವೆರಡು ಹೋಗಿರುತ್ತೆ.

ನಂಬರ್ 59150ನೇ ನೋಟಿನ ಯಡಭಾಗ ತುಕುಡ ಹತ್ತು ರೂಪಾಯಿ ಬಗೆ.
ನಂಬರ್ 60325ನೇ ನೋಟಿನ ಬಲಭಾಗದ ತುಕುಡಾ ಹತ್ತುರೂಪಾಯಿ ಬಗೆ.

ಇದನ್ನಾ ಪತ್ತೇಮಾಡಿ ಕೊಟ್ಟವರಿಗೆ 5 ರೂಪಾಯಿ ಇನಾಂ ಕೊಡುತ್ತೆ.

75—12—22.

ಶ್ರೀನಿವಾಸೈಯಂಗಾರ್ ಅಂಜೇ ಮುತ್ಸದ್ದಿ.

MYSORE GOVERNMENT PRESS, BANGALORE—1876.